Discussion on the Motion of thanks

೪–೩೦ ಪಿ. ಎಂ.

ಅಧ್ಯಕ್ಷರು.—ಈಗಾಗಲೇ ತಮ್ಮ ಪಕ್ಷದವರು, ವಿರೋದಪಕ್ಷದವರು ೩೦ ನಿಮಿಷಗಳ ಕಾಲ ತೆಗೆದು ಕೊಂಡಿದ್ದಾರೆ. ಮತ್ತೆ ತಮ್ಮ ಪಾರ್ಟಿಯವರು ಕೂಡ ೧೨½ ನಿಮಿಷಗಳ ಕಾಲ ತೆಗೆದುಕೊಂಡಿದ್ದಾರೆ.

ಶ್ರೀ ಅಜೀಜ್ ಸೇಟ್.—ಅದು ನನಗೆ ಗೊತ್ತಿಲ್ಲ.

ಅಧ್ಯಕ್ಷರು.—ಅದಕ್ಕೆ ನಿಮಗೆ ಗೊತ್ತಿಲ್ಲವೆಂದು ಹೇಳುತ್ತಿದ್ದೇನೆ.

SRI AZEEZ SAIT.—I do not know ಆದ್ದರಿಂದ I will speak to the relevant points.

ಶ್ರೀ ಮೈಕೇಲ್ ಫರ್ನಾಂಡೀಸ್.—ಮಾನ್ಯ ಅಧ್ಯಕ್ಷರೇ ಮೊನ್ನೆ ನನಗೆ ಒಂದು ಅವಕಾಶ ಸಿಕ್ಕ ಬೇಕಾಗಿತ್ತು ಅದು...

MR. SPEAKER.—I have seen the letter ಆದರೆ ಹೀಗೆ ತಾವು ಗಂಟೆಗಟ್ಟಲೆ ಮಾತ ನಾಡುತ್ತಾ ಹೋದರೆ ೧೦ ದಿವಸಗಳಾದರೂ ಮುಗಿಯುವುದಿಲ್ಲ. Please conclude within 30 minutes.

ಶ್ರೀ ಅಜೀಜ್ ಸೇಟ್ (ಮೈಸೂರು).—ನಾನು ಏನೋ ಮಾತನಾಡಬೇಕೆಂದು ಹೇಳಿ ಬಂದಿರು ತ್ತೇನೆ. ಅದು ನನ್ನ ಕರ್ತವ್ಯ. ಕರ್ತವ್ಯಕ್ಕೆ ಲೋಪ ಆಗಬಾರದೆಂದು ನಿಂತಿದ್ದೇನೆ. ನಾವು ಎಷ್ಟು ಮಾತ ನಾಡಿದರೂ ಸರ್ಕಾರಕ್ಕೆ ಅರ್ಥವಾಗುವುದಿಲ್ಲ. ಇನ್ನೂ ಹತ್ತುಜನರು ಮಾತನಾಡಿದರೂ ಸರ್ಕಾರಕ್ಕೆ ಅರ್ಥವಾಗುವುದಿಲ್ಲವೆಂದು ಹೇಳುತ್ತೇನೆ. ನಾನು ಹಿಂದೆ ಒಂದುಸಾರಿ ಹೇಳಿದ್ದೇನೆ. ಈವತ್ತು ಶ್ರೀಮಾನ್ ಲಕ್ಷ್ಮೀಸಾಗರ್‌ರವರು ಮತ್ತು ಶ್ರೀಮಾನ್ ಕೆ. ಎಚ್. ಶ್ರೀನಿವಾಸ್‌ರವರೂ .....

ಅಧ್ಯಕ್ಷರು.—ಪ್ರಾರಂಭಮಾಡಿ.

ಶ್ರೀ ಅಜೀಜ್ ಸೇಟ್.—ಪ್ರಾರಂಭಮಾಡುತ್ತೇನೆ. ಮಿಸ್ಟರ್ ಸ್ಪೀಕರ್ ಸರ್ ಈಗಾಗಲೇ ಸಾಕಷ್ಟು ಮಾತನಾಡಿದ್ದಾರೆ. ಸಾರಸಗಟ್ಟು ನಿಜಾಂಶ, ಸತ್ಯ ಧರ್ಮ ಎಂದು ಎಲ್ಲ ಏನಿದೆ ಅದರ ಬಗ್ಗೆ ಎಲ್ಲ ಮಾತ ನಾಡಿದ್ದಾರೆ. ನಾನು ಮೊನ್ನೆ ಹೋಗುತ್ತಾ ವಿಧಾನ ಸೌಧದ ಮುಂದೆ ಇರತಕ್ಕಂಥ ಬೋರ್ಡನ್ನು ನೋಡಿದೆ. "Government work is God's work" ಎಂದು ಇತ್ತು, ಇದನ್ನು ನೋಡಿ ಯಾವ ದೇವರ ಹೆಸರನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ ಎಂದೆನಿಸಿತು. ಆಲ್‌ಮೈಟಿ, ಈಶ್ವರ, ಅಲ್ಲ, ಎಂದು ಏನು ಹೇಳುತ್ತೇವೆಯೋ ಅದು ನಿಜವಾಗಿಯೂ ಏನಾದರೂ ಇದ್ದರೆ, ನಿಜವಾದ ದೇವರು ಇದ್ದರೆ, ಇಷ್ಟೊಂದು ಅಶಾಂತಿ, ಕರಪ್‌ಷನ್, ನೆಪೊಟಿಸಮ್, ಫೇವರಿಟಿಸಮ್, ಇನ್‌ಜಸ್ಟೀಸ್ ಮಾಡುವುದಕ್ಕೆ ಕಾರಣವೇ ಇರುತ್ತಿರಲಿಲ್ಲ. ದೇವರ ಹೆಸರಿನಲ್ಲಿ ನಿಜವಾಗಿಯೂ ಈ ರೀತಿ ಮಾಡುವುದಕ್ಕೆ ಆಗುತ್ತಿರಲಿಲ್ಲ. ಈವತ್ತು ನೋಡಿದರೆ ಎಲ್ಲ ತತ್ವಗಳನ್ನು ದೇವರ ಹೆಸರಿನಲ್ಲಿ ತದ್‌ವಿರುದ್ಧವಾಗಿ ಮಾಡಿಕೊಂಡು ಹೋಗುತ್ತಿರು ತ್ತಾರೆ. ನಾನು ಎರಡು ಮೂರು ವಿಚಾರಗಳಲ್ಲಿ ಬಹಳ ಸ್ಪೆಕ್ಟ್ ಆಗಿ ಮಾತನಾಡುತ್ತೇನೆ. ಹೆಚ್ಚಿಗೆ ಮಾತ ನಾಡುವುದಕ್ಕೆ ಹೋಗುವುದಿಲ್ಲ. ಏತಕ್ಕೆಂದರೆ ಈಗಾಗಲೇ ಎಲ್ಲ ಮಿತ್ರರು ಮಾತನಾಡಿದ್ದಾರೆ. ಪೇಜ್ ನಂಬರ್ ೫ರಲ್ಲಿ Full protection would be given to Scheduled Castes, Scheduled Tribes, Backward Class and Minorities. In page-11 of the Governor's address, it is stated. The welfare of Scheduled Castes/ Scheduled Tribes, Backward Classes and Minorities is fully secured. ಆದರೆ ಗೋಕಾಕ್ ಸಮಿತಿಯ ವರದಿಯಲ್ಲಿ ನಿಜವಾಗಿಯೂ ಸೆಕ್ಯೂರಿಟಿ ಆಗಿದೆಯೇ ಫುಲ್ ಆಫ್ ಸೆಕ್ಯೂರಿಟಿ ಆಗಿದೆ ಎಂದು ಯಾರು ಹೇಳುವುದು. ಸೆಕ್ಯೂರಿಟಿ ಯಾರಿಗೆ ಸಿಕ್ಕಿದೆಯೋ ಅವರು ಹೇಳ ಬೇಕು. ಈವತ್ತು ಅವರು ಬರೆದು ಎಲ್ಲ ಸರಿಮಾಡಿದ್ದೇವೆಂದು ಹೇಳಿದರೆ ಅದು ಸಾಧ್ಯವಿಲ್ಲ. ಈವತ್ತು ಫುಲೆಸ್ಟ್ ಪ್ರೊಟೆಕ್ಷನ್ ಕೊಟ್ಟಿದ್ದೇವೆಂದು ಹೇಳಿದರೆ ಈ ರಾಜ್ಯದಲ್ಲಿ ಈ ಸರ್ಕಾರ ಬಂದ ಮೇಲೆ ಶಿವಮೊಗ್ಗ ಡಿಸ್ಟ್ರಿಕ್ಟ್‌ನಲ್ಲಿ ಕಮ್ಯುನಲ್ ಕ್ಲಾಶಸ್ ಆಯಿತು ಈವತ್ತಿನವರೆಗೂ ಯಾರನ್ನು ಅರೆಸ್ಟ್ ಮಾಡಿಲ್ಲ. ನಲ್ಲೂರಿನಲ್ಲಿ ನಮ್ಮ ಶ್ರೀಮಾನ್ ಜೆ. ಎಚ್. ಪಟೇಲ್‌ರವರು ನಲ್ಲೂರಿನಿಂದ ಬರುತ್ತಾರೆ ಅಲ್ಲಿ ಮರ್ಡರ್

ಆಯಿತು ಈವತ್ತಿನವರೆಗೂ ಪ್ರಾಸಕ್ಯೂಷನ್ ಆಗಲಿಲ್ಲ. ಆದರೂ ಫುಲ್ ಸೆಕ್ಯೂರಿಟಿ ಪ್ರೊಟೆಕ್ಷನ್ ಕೊಟ್ಟಿದ್ದೇವೆಂದು ಮಾನ್ಯ ಮಂತ್ರಿಯವರು ಹೇಳುತ್ತಾರೆ. ಮೈನಾರಿಟಿಗೆ ತಾನೆ ನೀವು ಏನು ಸಹಾಯ ಮಾಡಿದ್ದು. ಹಿಂದೆ ಡಿಸ್ಟ್ರಿಕ್ಟ್ ಲೆವಲ್ ರಿಕ್ರೂಟ್‌ಮೆಂಟ್ ಕಮಿಟಿ ಎಂದು ಇತ್ತು. ಅದನ್ನು ರೂಲ್ಸ್ ಆಮೆಂಡ್‌ಮೆಂಟ್ ಮಾಡಿ ಪ್ರತಿಯೊಂದು ಕಮಿಟಿಯಲ್ಲೂ ಬ್ಯಾಕ್‌ವರ್ಡ್‌ಕ್ಲಾಸ್‌ಗೆ, ಪೆಡ್ಯೂಲ್‌ಕ್ಯಾಸ್ಟ್ ಮತ್ತು ಪೆಡ್ಯೂಲ್‌ಟ್ರೈಬ್ಸ್‌ಗೆ, ಮೈನಾರಿಟೀಸ್‌ಗೆ ಇಷ್ಟು ಸೀಟು ಎಂದು ಇತ್ತು. ನಿಮ್ಮ ಸರ್ಕಾರ ಬಂದ ಮೇಲೆ ಅದನ್ನು ರದ್ದು ಮಾಡಿಬಿಟ್ಟಿರಿ. ರದ್ದು ಮಾಡಿ ಈ ಒಂದು ಹೊಸ ಕಾನೂನನ್ನು ತೆಗೆದುಕೊಂಡು ಬಂದಿರುತ್ತೀರಿ. ಈ ಕಾನೂನು ವಿಷಯದಲ್ಲಿ ಮಾತನಾಡುವುದಕ್ಕೆ ಮೊದಲು ಇದರ ಹಿನ್ನೆಲೆಯನ್ನು ಸ್ವಲ್ಪ ಹೇಳಬೇಕಾಗಿದೆ. ೧೯೬೧ನೇ ಇಸವಿಯಲ್ಲಿ ನಾನು ಲೆಜಿಸ್ಲೇಚರ್ ಕೌನ್ಸಿಲ್ ಆಗಿ ನಾನು ಚುನಾಯಿತ ನಾಗಿ ಬಂದೆ. ಅಂದಿನಿಂದಲೂ ಕೂಡ ನಾನು ಕಡ್ಡಾಯವಾಗಿ ಡಿಮ್ಯಾಂಡ್ ಮಾಡುತ್ತಲೇ ಬಂದಿರುತ್ತೇನೆ ನಮ್ಮ ಉರ್ದು ಶಾಲೆಗಳಲ್ಲಿ ಕನ್ನಡಭಾಷೆ ಕಲಿಸುವಂಥದ್ದು ಆಗಲೇಬೇಕೆಂದು ಶ್ರೀಮಾನ್ ಜತ್ತಿಯವರು ಚೀಫ್ ಮಿನಿಸ್ಟರ್ ಆಗಿದ್ದಾಗಿನಿಂದಲೂ ಹೇಳಿಕೊಂಡೇ ಬಂದಿರುತ್ತೇನೆ. ಅವರಿಂ ಕಂಪಲ್‌ಸರಿಯಾಗಿ ಕನ್ನಡ ಮಾಡುತ್ತೇವೆಂದು ಹೇಳಿ ಆರ್ಡರ್‌ಕೂಡ ಇಷ್ಯೂ ಮಾಡಿದ್ದರು. ಕೆಲವು ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಬೆಳಗಾಮ್‌ನಲ್ಲಿ ಕನ್ನಡ ಆಗುವುದಿಲ್ಲವೆಂದು ಹೇಳಿ ವಾದವಿವಾದ ಮಾಡಿದ್ದಾರೆ. ೧೯೬೨ನೇ ಇಸವಿಯಲ್ಲಿ ಕನ್ನಡ ಕಂಪಲ್‌ಸರಿ ಅಧಿಷನಲ್ ಮಾಡಿದರು. ಕೊನೆಗೆ ೧೯೬೨ನೇ ಇಸವಿಯಿಂದ ೧೯೬೮ನೇ ಇಸವಿಯವರೆಗೆ ನಾವು ಎಲ್ಲೆಲ್ಲಿ ಅವಕಾಶ ಸಿಕ್ಕುತ್ತಿತ್ತೊ ಈ ಮನೆಯ ಒಳಗೆ, ಮನೆಯ ಆಚೆಕಡೆ, ಕಮಿಟಿಯಲ್ಲಿ, ಅಸೆಂಬ್ಲಿಯಲ್ಲಿ ಅಂದಿನಿಂದಲೂ ಒತ್ತಾಯ ಮಾಡುತ್ತಲೇ ಇದ್ದೇವೆ ಕನ್ನಡವನ್ನು ಮರಾಟಿ ಸ್ಕೂಲ್‌ಗಳಲ್ಲೂ ಕಂಪಲ್‌ಸರಿ ಮಾಡಬೇಕೆಂದು. ನಮ್ಮ ಆತ್ಮ ಸ್ನೇಹಿತರಾದ ಶ್ರೀಮಾನ್ ಶಂಕರೇಗೌಡರು.

Mr. Deputy Speaker in the Chair

(Interruption)

Sir, I request you that I want full protection I don't want to be interrupted from that side. If they are able to tolerate, I don't mind their interruptions.

SRI S. M. SHEERNALY CHANDRASHEKAR.—At the same time you must also be tolerant to listeners.

SRI AZEEZ SAIT.—First of all I don't speak in Kannada. ನಾನು ಈಗ ಕನ್ನಡದಲ್ಲಿ ಮಾತನಾಡಲಿಕ್ಕೆ ಪ್ರಾರಂಭ ಮಾಡಿದ್ದೇನೆ. ಮಧ್ಯದಲ್ಲಿ ನೀವೇನಾದರೂ ರೇಗಿಸಿದರೆ ನಾನು ಬಾಯಿಗೆ ಬಂದಹಾಗೆ ಮಾತನಾಡಬೇಕಾಗುತ್ತದೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಅದನ್ನು ನಾವು ಸಹನೆಯಿಂದ ಕೇಳಬೇಕು.

MR. DY. SPEAKER.—No interruption please.

ಶ್ರೀ ಕೆ. ಎಚ್. ಶ್ರೀನಿವಾಸ್.—ಆಪರನ್ನೇನಾದರೂ ಕೆಣಕಿದರೆ ಅವರು ಸಂಸ್ಕೃತದಲ್ಲಿ ಮಾತ ನಾಡುತ್ತಾರೆ.

ಶ್ರೀ ಅಜೀಜ್ ಸೇಟ್.—ಅವರಿಗೆ ನನ್ನ ಸಂಸ್ಕೃತ ಅರ್ಥವಾಗುವುದಿಲ್ಲ. ಆಂಧ್ರ ಸಂಸ್ಕೃತದಲ್ಲಿ ನಾನು ಮಾತನಾಡುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಶೀರ್ನಾಳಿ ಚಂದ್ರಶೇಖರ್‌ರವರಿಗೆ ಕಡಿಮೆ ವಯಸ್ಸು ಎಂದು ತಿಳಿದುಕೊಂಡಿರುತ್ತಾರೆ. ಬಹಳ ವಯಸ್ಸಾಗಿದೆ, ಆದರೆ ಬಣ್ಣ ಹಾಕುತ್ತಾರೆ.

ಶ್ರೀ ಅಜೀಜ್ ಸೇಟ್.—ಇಲ್ಲ ಇಲ್ಲ. ವಯಸ್ಸು ಎಂದರೆ ಗಾಪೆ ಹೇಳುತ್ತಾರೆ ಎಷ್ಟು ಕತ್ತೆ ವಯಸ್ಸು, ಐದು ಕತ್ತೆ ವಯಸ್ಸೋ, ಆರು ಕತ್ತೆ ವಯಸ್ಸೋ Let us not go into. I am elderly person to you.

(Interruption)

MR. DY. SPEAKER.—Please don't interrupt

ಶ್ರೀ ಆಜೀಜ್ ಸೇಟ್.—೧೯೬೮ರಲ್ಲಿ ನನ್ನ ಆತ್ಮ ಸ್ನೇಹಿತರಾದ ಶ್ರೀಮಾನ್ ಶಂಕರೇಗೌಡರು ಈ ಸದನದಲ್ಲಿ ಕನ್ನಡವನ್ನು ಕಂಪಲ್‌ಸರಿ ಮಾಡುತ್ತೇವೆಂದು ಹೇಳಿದರು.

It was a demand on the floor of this very House. What has happened after 1968 ? There was no implementation of that assurance made by the Hon'ble Minister on the floor of the House. In 1972 we stated implementing compulsory Kannada from third year in Urdu Schools ನಾಲ್ಕು ವರ್ಷವಾದರೂ ಮಾಡಲಿಲ್ಲ. ಈವತ್ತು ಎರಡೂವರೆ ಸಾವಿರ ಜನ ಅನ್‌ಎಂಪ್ಲಾಯ್ ಆಗಿದ್ದಾರೆ. ಸ್ಕೂಲ್‌ಗಳಲ್ಲಿ ವೇಕೆನ್ಸಿ ಇದೆ. ಉರ್ದು ಸ್ಕೂಲ್‌ಗಳಲ್ಲಿ ಕನ್ನಡ ಟೀಚರ್ಸ್ ವೇಕೆನೀಸ್ ಇದೆ, ನಾನು ಕೇಳುತ್ತೇನೆ ಸರ್ಕಾರಕ್ಕೆ ಏನಾದರೂ ಗೌರವ ಇದಿಯೇ ಎಂದು They are not honest to implement the assurance of that Minister to make Kannada compulsory education in Urdu schools by not filling up the vacancies, which clearly shows that they are not interested. ಈವತ್ತು ಚೀಮಾರಿ ಮಾಡುತ್ತಿದ್ದಾರೆ. ದೊಡ್ಡ ದೊಡ್ಡ ಭಾಷಣಗಳನ್ನು ಮಾಡುತ್ತಿದ್ದಾರೆ. ಇಡೀ ಸಮಾಜಕ್ಕೆ ಏನಾದರೂ ಅನುಕೂಲವಾಗುತ್ತಿದಿಯೇ. ಈವತ್ತು ಗೋಕಾಕ್ ವರದಿ ಬಂದಿದೆ. ಅದಕ್ಕೆ ವಿರುದ್ಧ ಮಾಡುತ್ತಿದ್ದಾರೆ. ಎಲ್ಲರೂ ವಿರುದ್ಧ ಮಾಡುತ್ತಿಲ್ಲ ಉರ್ದು ಲಾಂಗ್‌ವೇಜ್ ನಮಗೆ ಮಾತೃ ಭಾಷೆ, ಕಾನ್‌ಸ್ಟಿಟ್ಯೂಷನಲ್ ರೈಟ್ಸ್ ಇದೆ. ಫಸ್ಟ್ ಇಯರ್‌ಗೆ ಉರ್ದು ಭಾಷೆಯನ್ನು ಕೊಟ್ಟು ಎರಡನೆಯ ಭಾಷೆ ಕನ್ನಡವನ್ನು ಕಂಪಲ್‌ಸರಿ ಮಾಡಿ ಎಂದು ಕೇಳಿದ್ದೇವೆ. ಈವತ್ತು ಎಜ್ಯುಕೇಷನ್ ಮಿನಿಸ್ಟರ್ ಇದ್ದಾರೆ ತಿಳಿದುಕೊಳ್ಳಲಿ. ಸರ್ಕಾರದವರು ಯೋಚನೆ ಮಾಡಲಿ. ಈವತ್ತು ನಾವು ಯಾವ ಭಾಷೆಗೆ ಮಾನ್ಯತೆಯನ್ನು ಕೊಟ್ಟಿದ್ದೇವೆ, ಅಪಾಯಿಂಟ್ ಮಾಡುವಾಗ ಈವತ್ತು ಗೌವರ್ನಮೆಂಟ್ ಆರ್ಡರ್‌ನಲ್ಲಿ ಕನ್ನಡ ಲಾಂಗ್‌ವೇಜ್‌ಗೆ ಹೆಚ್ಚಾಗಿ ಕ್ಲಾಸ್ Kannada language test for appointment to Class III posts, under Karnataka Civil Services (Selection of Class II posts) Rule, 1981–prescription ಆರ್ಡರ್ಸ್ ತೆಗೆದಿದ್ದೀರಿ. ಇದರಲ್ಲಿ ಏನು ಹೇಳಿದ್ದೀರಿ ಎಂದರೆ ಕನ್ನಡ ೫೦ ಪರ್ಸೆಂಟ್ ಕಂಪಲ್‌ಸರಿಯಾಗಿ ಇರಬೇಕು Translation from English to Kannada and Vice-versa of a simple passage consisting of about 200 words. ಒಂದು ಭಾಗದಲ್ಲಿ ಇಂಗ್ಲೀಷ್ ಏನು ಇದೆ ಪರಂಗಿ ಭಾಷೆ ಅದನ್ನು ತೆಗೆದುಹಾಕುತ್ತೇವೆಂದರೆ ಹಿಂದಿ ಭಾಷೆಯನ್ನು ನ್ಯಾಷನಲ್ ಲಾಂಗ್‌ವೇಜ್ ಆಗಿ ಇಡಬೇಕು. ಸ್ಟೇಟ್ ಲಾಂಗ್‌ವೇಜ್ ಕನ್ನಡ ಇರಬೇಕು, ಮದರ್ ಟಂಗ್ ಇರಬೇಕೆಂದು ಹೇಳುವವರು ನೀವು ಏನಾದರೂ ಅಲ್ಪಸಂಖ್ಯಾತರಿಗೆ, ಲಿಂಗ್ವಿಸ್ಟಿಕ್ ಮೈನಾರಿಟಿಗೆ ಮತ್ತು ಮರಾಟಿಗೆ ಆಡುಭಾಷೆ ಕನ್ನಡದಲ್ಲಿ ಟ್ರಾನ್ಸ್‌ಲೇಟ್ ಮಾಡುತ್ತೇವೆ, ಅವರ ಭಾಷೆಗೆ ಟ್ರಾನ್ಸ್‌ಲೇಟ್ ಮಾಡುತ್ತೇವೆ ಎಂದರೆ ಅದು ಅರ್ಥವಿಲ್ಲದ ಮಾತು. ಅದರಲ್ಲಿ ಏನಾದರೂ ಉಪಯೋಗವಾಗುತ್ತದೆಯೇ ಎಂದು ಹೇಳುತ್ತೇನೆ. ನಾನು ಹೇಳುತ್ತಿರುವುದು ಸೆನ್ಸ್ ಇಲ್ಲವೆಂದು ಹೇಳಬಹುದು. ಉರ್ದು ಟಂಗ್ ಮದರ್ ಟಂಗ್, ಮರಾಟ ಟಂಗ್ ಮದರ್ ಟಂಗ್, ತಮಿಳು, ತೆಲುಗು ಮದರ್ ಟಂಗ್ ಈ ರೀತಿ ದೇಶದಲ್ಲಿ ನೂರಾರು ಜಾತಿ, ನೂರಾರು ಭಾಷೆಗಳನ್ನು ನಾವು ಇಟ್ಟುಕೊಂಡಿರುತ್ತೇವೆ, ಅದು ಅಲ್ಲದೆ ಇಂಗ್ಲೀಷನ್ನು ಇಟ್ಟು ಕೊಂಡು ಇನ್ನೂ ಅಲ್ಲಾಡುತ್ತಿದ್ದೇವೆ.

ನಿಮಗೆ ಏನಾದರೂ ಮಾನ ಮರ್ಯಾದೆ ಇದೆಯೆ ? ಇದ್ದರೆ ಹೇಳಿ.

ಒಬ್ಬ ಮಾನ್ಯ ಸದಸ್ಯರು.—ಏನು ಸ್ವಾಮಿ ಈ ರೀತಿ ಹೇಳುತ್ತೀರಿ ?

ಶ್ರೀ ಆಜೀಜ್ ಸೇಠ್.—ಮಾನ ಮರ್ಯಾದೆ ಇದ್ದರೆ ಸುಮ್ಮನೆ ಕುಳಿತುಕೊಳ್ಳಿ, ಮಾನ ಮರ್ಯಾದೆ ಇಲ್ಲದಿದ್ದರೆ ಎದ್ದೇಳಿ. ಇವತ್ತು ಯಾವುದೇ ಡಿಪಾರ್ಟ್‌ಮೆಂಟ್‌ನಲ್ಲಿ ರಿಕ್ರೂಟ್‌ಮೆಂಟ್ ಆಗಬೇಕಾದರೆ, ಎಕ್ಸಾಮ್‌ಗೆ ಕುಳಿತುಕೊಳ್ಳಬೇಕಾದರೆ ಕನ್ನಡ ಭಾಷೆಯನ್ನು ಕಂಪಲ್ಸರಿ ಮಾಡಿ ಅಲ್ಪಸಂಖ್ಯಾತರಿಗೆ ಉದ್ಯೋಗವಿಲ್ಲದಂತಾಗಿದೆ. ೧೯೮೦ನೇ ಇಸವಿಯಿಂದ ಇದೇ ರೀತಿಯಾಗಿ ಉದ್ಯೋಗವಿಲ್ಲದಂತಾಗಿದೆ.

ರಾಜಮಹಾರಾಜರ ಕಾಲದಲ್ಲಿ ೧೨ ಪರ್ಸೆಂಟ್ ಉದ್ಯೋಗದಲ್ಲಿದ್ದರು. ಇವತ್ತು ಅದು ಎರಡೂವರೆ ಪರ್ಸೆಂಟ್ ಆಗಿದೆ. ಮೈಸೂರು ಮಹಾರಾಜರ ಕಾಲದಲ್ಲಿ ಇದು ಯಾವುದೂ ಇರಲಿಲ್ಲ. ಆಗ ಬಹಳ ನ್ಯಾಯವಾಗಿತ್ತು. ಶ್ರೀಮಾನ್ ಗುಂಡೂರಾಯರು ಬಂದಮೇಲೆ ಆಗ ಏನೇನು ಮಾಡಿದ್ದರು ಎಲ್ಲವನ್ನು ಹೊಡೆದು ಬಿಸಾಕಿಬಿಟ್ಟರು. ೪ ಪರ್ಸೆಂಟ್ ಇರತಕ್ಕ ಜನ ೧೫ ಪರ್ಸೆಂಟ್ ಉದ್ಯೋಗಕ್ಕೆ ಸೇರಿದ್ದಾರೆ. ೧೨ ಪರ್ಸೆಂಟ್ ಇರುವ ಜನ ಎರಡೂವರೆ ಪರ್ಸೆಂಟ್‌ಗೆ ಬಂದಿದ್ದಾರೆ. ಮಾನ್ಯ ಸದಸ್ಯರಾದ ದೇವೇಗೌಡರು ಹೇಳಿದಹಾಗೆ ಯಾವಯಾವ ಕಮ್ಯೂನಿಟಿಗೆ ಕೆಲಸ ಸಿಕ್ಕಿದೆ ಅಂತಹ ಕಮ್ಯೂನಿಟಿಗೆ ಕೆಲಸ ಕೊಡುವುದನ್ನು ನಿಲ್ಲಿಸಿ, ಯಾವ ಕಮ್ಯೂನಿಟಿಗೆ ಕೆಲಸ ಸಿಕ್ಕಿಲ್ಲವೋ ಅಂತಹವರಿಗೆ ಕೆಲಸ ಕೊಡಿ ಎಂದು ಹೇಳಿದರಂ. ಸರ್ಕಾರ ಆ ಕೆಲಸ ಮಾಡುವುದಕ್ಕೆ ತಯಾರಾಗಿದೆಯೆ ? ಇವತ್ತು ಗುಂಡೂರಾಯರು ಡೋಲು ಬಜಾಯಿಸಿಕೊಂಡರು, ಇವರೇನು ತಮ್ಮ ಮುಖ್ಯಮಂತ್ರಿ ಸ್ಥಾನವನ್ನು ೨೦ ವರ್ಷ ಉಳಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ನಿಮಗೆ ನಿಮ್ಮ ಪಕ್ಷದಲ್ಲೇ ಶಾಪ ಹಾಕುತ್ತಿದ್ದಾರೆ. ಸ್ವಲ್ಪ ಭೀತಿಯಿಂದ ಕೆಲಸ ಮಾಡುವುದನ್ನು ಕಲಿಯಿರಿ. ಪ್ರಜಾಪ್ರಭುತ್ವದಲ್ಲಿ ಮಾನ ಮರ್ಯಾದೆಯನ್ನು ಮೆರೆಯೊ ಬೇಡಿ, ನಿಮಗೆ ಮಾನ ಮರ್ಯಾದೆ ಇದ್ದರೆ ತಾನೇ ಹೇಳುವುದು. ನಿಮ್ಮ ಮುಖ್ಯಮಂತ್ರಿಗಳು ಮಾಂಸ ತಿನ್ನುವ ಬ್ರಾಹ್ಮಣರು. "ಗೋವಿಂದ" ಎಂದು ಹೇಳುವ ಜನ ಮಾಂಸ ತಿನ್ನುವುದಕ್ಕೆ ಶುರು ಮಾಡಿದ್ದರಿಂದ ನಾವು ೧ ಕೆ.ಜಿ.ಗೆ ೨೦ ರೂಪಾಯಿಗಳನ್ನು ಕೊಟ್ಟು ತೆಗೆದುಕೊಳ್ಳಬೇಕಾಗಿದೆ. ಎಲ್ಲಾ ಮಾಂಸವನ್ನು ಅವರೇ ತಿಂದುಹಾಕುತ್ತಾರೆ ನಮಗೆಲ್ಲಿ ಸಿಗುತ್ತದೆ; ಈ ಮಾತನ್ನು ಹೇಳದೆ ವಿಧಿಯಿಲ್ಲ. ಕನ್ನಡ ಕಂಪಲ್ಸರಿ ಮಾಡುತ್ತೇವೆಂದು ಹೇಳುತ್ತೀರಿ, ಎಲ್ಲಿಂದ ಮಾಡಿದ್ದೀರಿ? ಇವತ್ತು ರಾಜ್ಯದಲ್ಲಿ ಗೋಕಾಕ್ ವರದಿಯ ಬಗ್ಗೆ ತಾಲ್ಲೂಕು ಮಟ್ಟದಲ್ಲಿ" ಹಳ್ಳಿಗಳಲ್ಲಿ ವಿರೋಧವಾಗಿ ಸಭೆಗಳನ್ನು ನಡೆಸುತ್ತಿದ್ದಾರೆ. ಎಲ್ಲಾ ಕಡೆಗಳಲ್ಲಿ ಗೋಕಾಕ್ ರಿಪೋರ್ಟನ್ನು ಹರಿದು ಹಾಕುತ್ತಿದ್ದಾರೆ. ಇದರಿಂದ ಕೆಲವರಿಗೆ ಅನುಮಾನ ಬಂದಿದೆ. ತಾವು ಈ ರೀತಿ ಮಾಡಿದರೆ ಯಾರು ಅಭ್ಯಾಸ ಮಾಡುತ್ತಾರೆ. ಈ ಪ್ರತ್ಯಾಸ ಮೊದಲು ಹೋಗಬೇಕು. ನೀವು ಮಾಡಿರುವ ಕಾನೂನು ಪ್ರಕಾರ DPAR 12 SCR 79, dated 8th July 1981. ಅದರಲ್ಲಿ ಒಂದು ಕಡೆ ಹೇಳುತ್ತಾರೆ, ಕನ್ನಡಕ್ಕೆ ಪ್ರಾಣ ಕೊಡುವ ಜನ, ಬೆಳ್ಳಿ ಹಬ್ಬ ಮಾಡಿದ ಜನ, ನಾನು ಅದನ್ನು ಓದುತ್ತೇನೆ.

NOTIFICATION

In exercise of the power conferred by the proviso to article 309 of the Constitution of India, the Governor of Karnataka hereby makes the following rules, namely : ಕೆಲವು ಹುದ್ದೆಗಳಿಗೆ ಕನ್ನಡವನ್ನು ಕಡ್ಡಾಯ ಮಾಡಿದ್ದಾರೆ. ಕೆಳಕಂಡ ಹುದ್ದೆಗಳಿಗೆ ಕನ್ನಡ ಕಡ್ಡಾಯ ಬೇಕಾಗಿಲ್ಲ.

1. .....

2. .....

3. Application.—Not withstanding anything contained in the Karnataka State Civil Services (Direct Recruitment by Selection) Rule, 1973, or the rules of recruitment specially made in respect of any service or post, these rules shall apply to all cadres or posts in Class III Service except the following cadres, namely :

i) Sub-Inspectors of Police.

ii) Forest Rangers Grade II.

iii) Drivers.

iv) Primary School Teachers and Secondary Assistants.

v) such other Class III posts as may be notified by the Government.

ಇದರ ಹಿನ್ನೆಲೆಯಲ್ಲಿ ಒಂದು ವಿಷಯವನ್ನು ಹೇಳಬೇಕೆಂದಿದ್ದೇನೆ. ೧೯೬೯ನೇ ಇಸವಿಯಲ್ಲಿ ಮಾನ್ಯ ನಿಜಲಿಂಗಪ್ಪನವರ ಸರ್ಕಾರ ಇದ್ದಂತಹ ಕಾಲದಲ್ಲಿ, ಕನ್ನಡಬಾರದ ಅಧಿಕಾರಿಗಳಿಗೆ ಇನ್‌ಕ್ರಿಮೆಂಟ್, ಪ್ರಮೋಷನ್ ಇಲ್ಲವೆಂದು ವಾದ ಮಾಡಿದರು. ಆಗ ಕನ್ನಡಬಾರದ ಜನ ಹೈಕೋರ್ಟಿಗೆ ಹೋದರೆ High Court said Language shalll not be the barrier for appointment ಎಂದು ಒಂದು ತೀರ್ಮಾನ ಕೊಟ್ಟರು. ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಅಪೀಲು ಮಾಡಿದರು Supreme Court also upheld the decision of the High Court ಏನೇ ಇರಲಿ, ಯಾರೇ ಆಗಲಿ ಕೆಲಸಕ್ಕೆ ಸೇರಿದ ಮೇಲೆ ರಾಜ್ಯಭಾಷೆ ಯಾವುದು ಇದೆ ಅದನ್ನು ೩-೪ ವರ್ಷಗಳಲ್ಲಿ ಕಡ್ಡಾಯವಾಗಿ ಕಲಿಯಬೇಕೆಂದು ಹೇಳುವುದು ಧರ್ಮ. ಆರ್ಟಿಕಲ್ ೩೧೧ರ ಪ್ರಕಾರ ಗಂಡ ಹೆಂಡತಿ, ಐ.ಎ.ಎಸ್. ಅಧಿಕಾರಿಗಳಾಗಿ ಎಲ್ಲಿ ಇರುತ್ತಾರೆ ಅಲ್ಲೇ ಇರುತ್ತಾರೆ. ಇವರಿಗೆ ಕನ್ನಡ ಬರದಿದ್ದರು, ಕಲಿಯದಿದ್ದರು ಪರವಾಗಿಲ್ಲ ಅವರು ಪಂಜಾಬ್, ಆಸ್ಸಾಂನಿಂದ ಬಂದಿರುತ್ತಾರೆ ಅವರಿಗೆ ಮಾತ್ರ ಕಡ್ಡಾಯ ವಿಲ್ಲ. ಅಂತಹವರು ನಮಗೆ ಕನ್ನಡ ಕಲಿಯಿರಿ ಎಂದು ಹೇಳುತ್ತಿದ್ದಾರೆ. ಇದು ಯಾವರೀತಿ ಇದೆ ಎನ್ನುವುದನ್ನು ಯೋಚನೆ ಮಾಡಬೇಕು. ನನಗೆ ಇದರಲ್ಲಿ ಆಶ್ಚರ್ಯವಾಗುವುದೇನೆಂದರೆ, ಗೋಕಾಕ್ ವರದಿಯಲ್ಲಿ ಕೆಲವು ಪ್ಯಾರಗಳಲ್ಲಿ ಬರೆದಿದ್ದಾರೆ. ಕನ್ನಡ ಭಾಷೆಗೆ ಮಾನ್ಯತೆ ಕೊಡದಿದ್ದರೆ ಹಾಗೆಹೀಗೆ ಎಂದು ಪತ್ರಿಕಾ ಹೇಳಿಕೆ ಕೊಟ್ಟರು. ಗೋಕಾಕ್ ವರದಿಯನ್ನು ಸಚಿವಸಂಪುಟದ ತೀರ್ಮಾನಕ್ಕೆ ಹೋಗುವುದಕ್ಕೆ ಮೊದಲು ಲಾ ಡಿಪಾರ್ಟ್‌ಮೆಂಟ್ ಮತ್ತು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರನ್ನು ಈ ವರದಿ ಸಂವಿಧಾನದ ಪರವಾಗಿದಿಯೇ, ವಿರೋಧವಾಗಿದಿಯೇ ಎಂಬುದನ್ನು ವಿಚಾರ ಮಾಡಬೇಕಾಗಿತ್ತು. ನೀವು ಇದರಲ್ಲಿ ಗೆಲ್ಲುತ್ತೀರಿ ಸಂತೋಷ. ಈ ವರದಿಯನ್ನು ಕಣ್ಣುಮುಚ್ಚಿಕೊಂಡು ಒಪ್ಪಿ ಕೊಂಡಿದ್ದೀರಾ ? ಎಂದು ನಾನು ಕೇಳುತ್ತಿದ್ದೇನೆ. ಇವತ್ತು ರಾಜ್ಯದಲ್ಲಿ ಯಾವುದೇ ಭಾಷೆಯವರು ಇರಲಿ, ಅವರ ಭಾಷೆಯ ಬೆಳವಣಿಗೆಯ ಬಗ್ಗೆ ಹೇಳುವುದಕ್ಕೆ ಸಾಧ್ಯವಿಲ್ಲ. ಕೆಲಸ ಸಿಗದಿದ್ದರೆ ಭಾಷೆ ದೊಡ್ಡದು ಅಲ್ಲ. ಈ ವರದಿಯನ್ನು ಒಪ್ಪಿಕೊಂಡು, ಮೊದಲ ಭಾಷೆ ಕನ್ನಡ, ಎರಡನೆ ಭಾಷೆ ಉರ್ದು ಮೂರನೇ ಭಾಷೆ ಇಂಗ್ಲೀಷ್ ಎಂದು ಮಾಡಿ, ಅಥವಾ ಮೊದಲ ಭಾಷೆ ಉರ್ದು, ಎರಡನೇ ಭಾಷೆ ಇಂಗ್ಲೀಷ್, ಮೂರನೇ ಭಾಷೆ ಕನ್ನಡ ಎಂದು ಮಾಡಿ. ಅಥವಾ ಮೊದಲ ಭಾಷೆ ಇಂಗ್ಲೀಷ್, ಎರಡನೇ ಭಾಷೆ ಉರ್ದು, ಮೂರನೇ ಭಾಷೆ ಕನ್ನಡ ಎಂದು ಮಾಡಿ. ಈ ರೀತಿ ಮಾಡಿ ಇಂಗ್ಲೀಷ್ ಮೀಡಿಯಂನ್ನು ತೆಗೆದುಬಿಡಿ. ಇಂಗ್ಲೀಷ್ ಬದಲು ಅವರವರ ಮಾತೃಭಾಷೆಯಾದಂಥ ಕನ್ನಡ, ತೆಲುಗು, ತಮಿಳು, ಉರ್ದು ಮುಂತಾದ ಭಾಷೆಗಳಲ್ಲಿ ಓದುವುದಕ್ಕೆ ಅವಕಾಶ ಮಾಡಿಕೊಡಿ. ಹಳೆಯ ಮೈಸೂರು ಇದ್ದಾಗ ಮಿಡಲ್ ಸ್ಕೂಲ್ ಹಂತದಲ್ಲಿ ಇಂಗ್ಲೀಷ್ ಮೀಡಿಯಂ ಇತ್ತು. ಅದೇ ರೀತಿ ಉರ್ದು ಮೀಡಿಯಂನಲ್ಲಿ ಕಲಿತವರಿಗೆ ಹೈಸ್ಕೂಲ್ ಹಂತದಲ್ಲಿ ಇಂಗ್ಲೀಷ್ ಮೀಡಿಯಂ ಇತ್ತು. ನಮ್ಮ ಕರ್ನಾಟಕ ರಾಜ್ಯ ಎಂದು ಆದಮೇಲೆ ಅಂದರೆ ಬೇರೆಬೇರೆ ಭಾಗಗಳನ್ನು ನಮ್ಮ ಮೈಸೂರು ರಾಜ್ಯಕ್ಕೆ ಬಂದು ಸೇರಿದ ಮೇಲೆ ಯಾವಯಾವ ತಾಲ್ಲೂಕ್‌ಗಳಲ್ಲಿ ಇಂಗ್ಲೀಷ್ ಮೀಡಿಯಂ ಸ್ಕೂಲುಗಳು ಇದ್ದವೋ ಅವೆಲ್ಲಾ ಕನ್ನಡ ಮೀಡಿಯಂ ಸ್ಕೂಲುಗಳಾದವು. ಈ ಕಾರಣದಿಂದ ಇವೊತ್ತು ಯಾರಾದರು ಇಂಗ್ಲೀಷ್ ಮೀಡಿಯಂ ನಲ್ಲಿಯೇ ಕಲಿಯಬೇಕಾಗಿದ್ದರೆ ಅಂತಹ ಸ್ಕೂಲ್‌ಗಳನ್ನು ಹುಡುಕಿಕೊಂಡು ಹೋಗಬೇಕಾಗಿದೆ. ಅಂದರೆ ಇವೊತ್ತು ಯಾರು ಆರ್ಥಿಕವಾಗಿ ಚೆನ್ನಾಗಿದ್ದಾರೋ ಅಂತಹವರು ಮಾತ್ರ ತಮ್ಮ ಮಕ್ಕಳನ್ನು ಇಂತಹ ಶಾಲೆಗಳಿಗೆ ಕಳುಹಿಸಲಂ ಸಾಧ್ಯವೇ ಹೊರತು ಎಲ್ಲರಿಗೂ ಸಾಧ್ಯವಿಲ್ಲ. ಇದೇ ಕಾರಣದಿಂದ ಮಿಡಲ್ ಸ್ಕೂಲ್ ಹಂತದಲ್ಲಿ ೮೮ ಪರ್ಸೆಂಟ್‌ವರೆಗೆ ಓದುವುದನ್ನು ನಿಲ್ಲಿಸುತ್ತಾರೆ. ನಾವು ೩೦ ಲಕ್ಷದಷ್ಟು ಈ ರಾಜ್ಯದಲ್ಲಿ ಇದ್ದೇವೆ. ಅಂದರೆ ೧೧ ಪರ್ಸೆಂಟ್ ಇದ್ದೇವೆ. ಮೇಲ್ ಪೈಕಿ ಎರಡು ಪರ್ಸೆಂಟ್ ಹಾಗೂ ವುವೆನ್ ಪೈಕಿ ಅರ್ಧ ಪರ್ಸೆಂಟ್‌ವರೆಗೆ ಮಾತ್ರ ವಿದ್ಯಾಭ್ಯಾಸ ಕಲಿಯುವುದಕ್ಕೆ ಹೋಗುತ್ತಿರುವುದು. ಈ ರಾಜ್ಯದಲ್ಲಿ ನಮ್ಮ ಜನಾಂಗಕ್ಕೆ ಸಂಬಂಧಪಟ್ಟಂತೆ ಹೇಳಬೇಕೆಂದರೆ, ೫ ಕಾಲೇಜುಗಳಿವೆ, ೨೨ ಹೈಸ್ಕೂಲ್‌ಗಳಿವೆ, ಪ್ರೀ - ಪ್ರೈಮರಿ ಟೀಚರ್ಸ್ ಇನ್ಸ್‌ಟಿಟ್ಯೂಟ್ ಎರಡು ಇವೆ. ಒಂದು ಶಿವಮೊಗ್ಗದಲ್ಲಿ ಮತ್ತೊಂದು ಗುಲ್ಬರ್ಗದಲ್ಲಿ ಇವೆ. ಡೀ-ಫಾರ್ಮ ಒಂದು ಇದೆ. ಇಂಜಿನಿಯರಿಂಗ್ ಕಾಲೇಜು ೨ ಇವೆ. ಒಂದು ಪಾಲಿಟೆಕ್ನಿಕ್ ಇದೆ. ಇವುಗಳ ಜೊತೆಗೆ ನರ್ಸರಿ ಸ್ಕೂಲುಗಳೂ ಸಹ ಇವೆ. ಆದ್ದರಿಂದ ಸರ್ಕಾರದವರು ಈ ವಿಚಾರದಲ್ಲಿ ಮತ್ತೊಮ್ಮೆ ಸಮಾಲೋಚನೆ ಮಾಡಿ ಒಂದು ವರದಿ ಕೊಡಲು ಶಾಸಕರೇ ಇರುವಂತಹ ಒಂದು ಕಮಿಟಿಯನ್ನು ರಚನೆ ಮಾಡಿ ಇಲ್ಲವೇ ಎಜುಕೇಷನಿಸ್ಟ್ ಯಾರು ಇದ್ದಾರೆ ಅಂತಹವರಂ ಒಳಗೊಂಡಂತಹ ಒಂದು ಕಮಿಟಿ ರಚನೆ ಮಾಡಿ. ಅವರು ಯಾವ ರೀತಿ ಪರಿಹಾರ ಕೊಡಬೇಕೆಂದು ತಮ್ಮ ವರದಿಯಲ್ಲಿ ತಿಳಿಸು

ತ್ತಾರೆ. ನಾವು ಇಷ್ಟೆಲ್ಲಾ ಹೇಳುತ್ತಿದ್ದರೂ ಸಹ ಈ ಸರ್ಕಾರ ತನ್ನ ಕಿವಿಯ ಮೇಲೆ ಹಾಕಿಕೊಳ್ಳುತ್ತಲೇ ಇಲ್ಲ. ಈ ಸರ್ಕಾರ ಎಮ್ಮೆಯಂತೆ ಇದೆ. ಎಮ್ಮೆ ಕುಳಿತಿದ್ದಾಗ ಅದಕ್ಕೆ ಚಾಟಿಯಿಂದ ಒಂದು ಸಲ, ಎರಡು ಸಲ, ಮೂರು ಸಲ ಹೊಡೆದರೂ ಸಹ ಅದು ಎದ್ದೇಳುವುದಿಲ್ಲ.

ಶ್ರೀ ಮೈಕೆಲ್ ಬಿ. ಫರ್ನಾಂಡೀಸ್.—ತಮ್ಮ ಮಾತನ್ನು ಕೇಳಿ ಅವರು ಹೆಮ್ಮೆ ಪಟ್ಟರು.

ಶ್ರೀ ಪಿ. ರಾಮದೇವ್.—ಎಮ್ಮೆ ಎಲ್ಲಿಯಾದರೂ ಕುಳಿತುಕೊಳ್ಳುತ್ತದೆಯೇ?

ಶ್ರೀ ಆಜೀಜ್ ಸೇಟ್.—ಎಮ್ಮೆ ನೀರಿನಲ್ಲಿ ಕುಳಿತುಕೊಳ್ಳುತ್ತದೆ. ನೀವು ಬ್ಯಾಚುಲರ್ ಇದ್ದೀರಿ. ಆದ್ದರಿಂದ ಇದು ನಿಮಗೆ ಗೊತ್ತಿಲ್ಲ. ಎಮ್ಮೆಗೆ ೫–೬ ಸಲ ಚಾಟಿಯಿಂದ ಹೊಡೆದಾಗಲೇ ಅದು ಮೇಲೆ ಎದ್ದೇಳುವುದು.

ಶ್ರೀ ವೈ. ರಾಮಕೃಷ್ಣ.—ನಮ್ಮದು ಹೆಮ್ಮೆಯ ಸರ್ಕಾರ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಆಜೀಜ್ ಸೇಟ್.—ಮಾನ್ಯ ಮಂತ್ರಿಗಳಿಗೆ ಮೀಸೆಯೇ ಇಲ್ಲ. ಆದ್ದರಿಂದ ಅವರು ಕೆಳಗೆ ಬಿದ್ದರೂ ಸಹ ಅವರ ಮೀಸೆ ಮಣ್ಣಾಗುವ ಪ್ರಶ್ನೆಯೇ ಬರುವುದಿಲ್ಲ. ಒಟ್ಟಿನಲ್ಲಿ ನಿಮಗೆ ಶಹಭಾಸ್‌ಗಿರಿ ಕೊಡುವುದಕ್ಕೆ ನಾನು ತಯಾರಿಲ್ಲ. ನೀವು ಅದಕ್ಕೆ ಲಾಯಕ್ಕೂ ಇಲ್ಲ ಏಕೆಂದರೆ ಇಂತಹ ವಿಚಾರದ ಬಗ್ಗೆ ಮಾತನಾಡುವುದಕ್ಕೆ ನಿಮಗೆ ಧೈರ್ಯವೇ ಇಲ್ಲ. ವಿಧಾನಸೌಧದ ಮೇಲೆ ಸರ್ಕಾರದ ಕೆಲಸ ದೇವರ ಕೆಲಸ ಎಂದು ಬರೆಸಿದ್ದಾರೆ. ಆಂದರೆ ಇವರ ದೇವರು ಯಾರು ಎಂದು ನಾನು ಯೋಚನೆ ಮಾಡಿದೆ. ನಾನು ಯೋಚನೆ ಮಾಡಿದ ಪ್ರಕಾರ ಇವರ ದೇವರು ಭಗವದ್ಗೀತೆಯ ಕೃಷ್ಣನೂ ಅಲ್ಲ, ಕುರಾನಿನ ಅಲ್ಲಾ ಕೂಡ ಅಲ್ಲ, ಅದೇರೀತಿ ಬೈಬಲ್‌ನ ಜೀಸಸ್ ಕೂಡ ಅಲ್ಲ ಎಂಬ ತೀರ್ಮಾನಕ್ಕೆ ಬಂದೆ. ಅಂದಮೇಲೆ ಇವರ ದೇವರು ಯಾರು? ಶ್ರೀಮತಿ ಇಂದಿರಾಗಾಂಧಿ ಅವರೇ ಇವರ ದೇವರು. ಅವರ ಒಂದು ಆಶೀರ್ವಾದ ವಿರುವವರೆಗೆ ನಾನು ಅಧಿಕಾರದಲ್ಲಿ ಮುಂದುವರೆಯುತ್ತೇನೆಂದು ಮುಖ್ಯಮಂತ್ರಿಗಳೇ ಹೇಳಿದ್ದಾರೆ. ಮತ್ತು ಅಲ್ಲಿಯವರೆಗೆ ಯಾರೂ ನನ್ನನ್ನು ಅಲ್ಲಾಡಿಸುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ಆದ್ದರಿಂದ Sri Gundu Rao is a messenger of Goddess Indira. ಎಂಬ ತೀರ್ಮಾನಕ್ಕೆ ನಾನು ಬಂದಿದ್ದೇನೆ. ಈ ಮೊದಲು ಇವರ ಕಡೆ ಕೇವಲ ೩೫ ಜನರು ಮಾತ್ರ ಇದ್ದದ್ದು. ಅನಂತರ ಶ್ರೀ ಎಚ್. ಸಿ. ಶ್ರೀಕಂಠಯ್ಯ ಅವರು ತಾವು ಉಪ–ಮುಖ್ಯಮಂತ್ರಿಯಾಗಬಹುದೆಂದು ೮೦ ಜನ ಶಾಸಕರನ್ನು ಇವರ ಕಡೆಗೆ ಕರೆದುಕೊಂಡು ಹೋಗಿ ಈಗಿನ ಮುಖ್ಯಮಂತ್ರಿಗಳ ಕೈಗೆ ಒಪ್ಪಿಸಿದರು. ನಂತರ ಅವರು ಇಷ್ಟೂ ಜನರನ್ನು ಅಲ್ಲಿ ಈಗ ಕಾರಿಗಳಂತೆ ಕಟ್ಟಿ ಹಾಕಿದ್ದಾರೆ. ಈ ಮಾತನ್ನು ಹೇಳುವಾಗ ನನಗೆ ಒಂದು ವಿಷಯ ಜ್ಞಾಪಕಕ್ಕೆ ಬರುತ್ತದೆ. ಅದೇನೆಂದರೆ, ಆಗಸ ಕತ್ತೆಯ ಮೇಲೆ ಹಳೆ ಬಟ್ಟೆಗಳನ್ನು ಹಾಕಿಕೊಂಡು ಬಟ್ಟೆ ಒಗೆಯುವ ಜಾಗಕ್ಕೆ ಹೋಗುತ್ತಾನೆ. ಅಲ್ಲಿ ಕತ್ತೆಯ ಮೇಲಿರುವ ಭಾರದ ಬಟ್ಟೆಗಳನ್ನು ಕೆಳಗೆ ತೆಗೆದುಹಾಕಿದ ಕೂಡಲೇ ಅದು ಓಡಿ ಹೋಗುತ್ತದೆಂದು ಕೊಡಲೇ ಅದರ ಕಾಲುಗಳಿಗೆ ಹಗ್ಗ ಕಟ್ಟುತ್ತಾನೆ. ಆಗ ಕತ್ತೆ ಅಯ್ಯೋ ಪಾಪ, ಈತ ನನ್ನ ಕಾಲಿಗೆ ಬೇಳುತ್ತಿದ್ದಾನೆ ಎಂದು ಅದು ತಿಳಿದುಕೊಳ್ಳುತ್ತದೆ. ಅದೇ ರೀತಿ ಈ ೮೦ ಜನರೂ ಸಹ ತಿಳಿದುಕೊಂಡಿದ್ದಾರೆ. ಅದು ಏನೇ ಇರಲಿ, ಮೇ ಅಥವಾ ಜೂನ್ ತಿಂಗಳಲ್ಲಿ ಚುನಾವಣೆ ಬರುತ್ತದೆ. ಆಗ ನೀವೆಲ್ಲಾ ಚುನಾವಣಾ ಕಣಕ್ಕೆ ಬನ್ನಿ, ನೋಡೋಣ. ಒಂದು ಕಾಲದಲ್ಲಿ ಇವರೆಲ್ಲರೂ ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆಂದು ಹಾರಾಡುತ್ತಿದ್ದರು. ಆದರೆ ಈಗ ಎಲ್ಲರೂ ಸಪ್ಪೆಯಾಗಿ ಕೂತಿದ್ದಾರೆ. ಅದೇ ನನಗೆ ಬಂದಿರುವ ಯೋಚನೆ.

ಶ್ರೀ ಡಿ. ಟಿ. ರಾಮು.—ನೀವು ಚುನಾವಣೆಯಲ್ಲಿ ಡಿಪಾಜಿಟ್ ಕಳೆದುಕೊಳ್ಳುವುದಕ್ಕೆ ತಯಾರಿದ್ದೀರೋ?

ಶ್ರೀ ಆಜೀಜ್ ಸೇಟ್.—ನಾನು ಇಲ್ಲದಿದ್ದರೆ ನಿಮಗೆ ಚನ್ನಪಟ್ಟಣದಲ್ಲಿ ಓಟುಗಳೇ ಸಿಗುತ್ತಿರಲಿಲ್ಲ. ಇದನ್ನು ತಾವು ತಿಳಿದುಕೊಳ್ಳಬೇಕು. ನಾನು ಮತ್ತೆ ಅಲ್ಲಿಗೆ ಬರುತ್ತೇನೆ. ಮಾನ್ಯ ಸದಸ್ಯರು ಡಿಪಾಜಿಟ್ ವಿಚಾರ ಹೇಳುತ್ತಿದ್ದಾರೆ. ನನ್ನನ್ನು ಸೋಲಿಸಲು ಯಾವನು ಹುಟ್ಟಿದ್ದಾನೆ?

ಶ್ರೀ ಕೆ.ಎಚ್. ಶ್ರೀನಿವಾಸ್.—ನಾವು ಡಿಪಾಜಿಟ್ ಆದರೂ ಕಳೆದುಕೊಳ್ಳುತ್ತೇವೆ, ಮನೆಗಾದರೂ ಹೋಗುತ್ತೇವೆ, ಆದರೆ ನೀವುಗಳು ಟಿಕೇಟ್ ಭದ್ರ ಮಾಡಿಕೊಂಡಿದ್ದೀರಾ, ಅದನ್ನು ನೋಡಿ.

ಶ್ರೀ ಆಜೀಜ್ ಸೇಟ್.—ಕಳೆದ ೨೨ ವರ್ಷಗಳಿಂದ ನಾನು ಶಾಸಕನಾಗಿದ್ದೇನೆ. ಪಿ. ಎಸ್. ಪಿ. ಯಿಂದ ಗೆದ್ದಿದ್ದೇನೆ; ಎಸ್.ಎಸ್.ಪಿ. ಯಿಂದ ಗೆದ್ದಿದ್ದೇನೆ. ಕಾಂಗ್ರೆಸ್‌ನಿಂದ ಗೆದ್ದಿದ್ದೇನೆ ಆದ್ದರಿಂದ ಯಾವ ನನ್ಮಗನೂ ನನ್ನನ್ನು ಸೋಲಿಸುವುದಕ್ಕಾಗುವುದಿಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ.—ಮಾನ್ಯ ಸದಸ್ಯರು ಯಾವ ನನ್ಮಗ ಎಂದು ಹೇಳಿದರು. ಇದು ಅನ್-ಪಾರ್ಲಿಮೆಂಟರಿ ಆಗುತ್ತದೆ.

ಶ್ರೀ ಅಜೀಜ್ ಸೇಟ್.—ನಾನು ಹೇಳಿದ್ದು ನನ್ನ ಮಗರೀ, ನನಗೆ ೩ ಜನ ಗಂಡು ಮಕ್ಕಳಿದ್ದಾರೆ, ೫ ಜನ ಹೆಣ್ಣುಮಕ್ಕಳಿದ್ದಾರೆ. ಅನೇಕ ಮೊಮ್ಮಕ್ಕಳಿದ್ದಾರೆ. ಆದ್ದರಿಂದ ನನ್ನ ಮಗನೇ ನನ್ನ ವಿರುದ್ಧ ನಿಂತುಕೊಳ್ಳಬಹುದು. ಅದಕ್ಕೆ ತಾವು ಏತಕ್ಕೆ ಸಿಟ್ಟು ಮಾಡಿಕೊಳ್ಳುತ್ತೀರಿ? ತಾವು ಹೇಳುವುದನ್ನು ನೋಡಿದರೆ, ಒಂದು ಗಾದೆ ಜ್ಞಾಪಕಕ್ಕೆ ಬರುತ್ತದೆ. 'ಕುಂಬಳಕಾಯಿ ಕಳ್ಳ ಎಂದರೆ ಯಾರೋ ಹೆಗಲು ಮುಟ್ಟಿ ನೋಡಿಕೊಂಡರಂತೆ' ಆ ರೀತಿ ಆಗಿದೆ ಮಾನ್ಯ ಭಾಸ್ಕರಶೆಟ್ಟಿ ಅವರಂತಹವರು ಒಂದು ಸಲ ಮುಂಬೈನಲ್ಲಿರುವ ಮಾರ್ಕೆಟ್ ಒಂದಕ್ಕೆ ಮಾವಿನಹಣ್ಣು ಕೊಳ್ಳಲು ಹೋದರು. ಅಲ್ಲಿ ಹಣ್ಣಿನ ಬೆಲೆ ಕೇಳಿದಾಗ ಡಜನ್‌ಗೆ ೧೨ ರೂ. ಗಳೆಂದು ಹೇಳಿದ. ಇಷ್ಟು ಸಣ್ಣ ಸೈಜಿನ ಹಣ್ಣುಗಳಿಗೆ ಅಷ್ಟೊಂದು ದುಡ್ಡೇ ಎಂದು ಅವರು ಕೇಳಿದಾಗ, ಹಣ್ಣು ಮಾರುವವನು ತಾವು ಕುತಬ್‌ಮಿನಾರ್ ಮೇಲಿನಿಂದ ನೋಡಿದರೆ ಆ ರೀತಿ ಕಾಣುತ್ತದೆ. ತಾವು ಕೆಳಗೆ ಬಗ್ಗಿ ನೋಡಿ, ಇವು ಎಷ್ಟು ದಪ್ಪ ಇವೆ ಎಂಬುದು ತಿಳಿಯುತ್ತದೆ ಎಂದು ಹೇಳಿದ. ಈ ಮಾತನ್ನು ಏತಕ್ಕೆ ಹೇಳುತ್ತೇನೆಂದರೆ, ಯಾರು ಎತ್ತರ ಇರುತ್ತಾರೋ ಅಂತಹವರಿಗೆ...

ಶ್ರೀ ಬಿ. ಭಾಸ್ಕರಶೆಟ್ಟಿ.—ನೀವೂ ಸಹ ಎತ್ತರ ಇದ್ದೀರಿ.

ಶ್ರೀ ಅಜೀಜ್ ಸೇಟ್.—ನಿಮಷ್ಟು ಎತ್ತರ ಇಲ್ಲ. ಸ್ವಲ್ಪ ಕಡಿಮೆ ಇದ್ದೇನೆ. ಈ ಮನೆಯೆಲ್ಲಿ ಅತಿ ಎತ್ತರದವರು ಒಬ್ಬರಿದ್ದಾರೆ, ಅದೇ ರೀತಿ ಅತಿ ಕಡಿಮೆ ಎತ್ತರದವರು ಒಬ್ಬರಿದ್ದಾರೆ. ಅವರ ಹೆಸರನ್ನು ನಾನು ಹೇಳುವುದಿಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಏತಕ್ಕೆ?

ಶ್ರೀ ಅಜೀಜ್‌ಸೇಟ್.—ಏತಕ್ಕೆಂದರೆ, tallest is the foolest and the shortest is the mischievous ಎಂದು ಹೇಳುತ್ತಾರೆ. ಅದಕ್ಕೇ ನಾನು ಹೆಸರು ಹೇಳುವುದಿಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ.—ಅದು ಯಾವ ಡಿಕ್ಷನರಿಯಲ್ಲಿದೆ?

ಶ್ರೀ ಕೆ. ಎಚ್. ಶ್ರೀನಿವಾಸ್.—ಅದು ಕುರಾನ್‌ನಲ್ಲಿದೆ.

ಶ್ರೀ ಅಜೀಜ್‌ಸೇಟ್.—ಹೌದು, ಅದರ ಕಾಪಿ ಬೇಕಾದರೆ ತಮಗೆ ಕೊಡುತ್ತೇನೆ, ತಾವು ಓದಿ ನೋಡಿ. ಭಾಷೆಯ ವಿಚಾರದಲ್ಲಿ ಈ ರೀತಿ ಸರ್ಕಾರದವರು ವ್ಯವಹಾರ ಮಾಡಿದ್ದೇ ಆದರೆ ನಮ್ಮ ರಾಜ್ಯಕ್ಕೂ ಹಾನಿ, ನಮ್ಮ ಜನರಿಗೂ ಕಷ್ಟ. ಆದ್ದರಿಂದ ತಮ್ಮ ಮೂಲಕ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಈ ರಾಜ್ಯದಲ್ಲಿ ಯಾರು ಯಾರು ಅಲ್ಪಸಂಖ್ಯಾತರು ಇದ್ದಾರೆ, ಅಂತಹವರಿಗೆ ಅವರವರ ಮಾತೃಭಾಷೆಯಲ್ಲಿ ಕಲಿಯಲು ಅವಕಾಶ ಮಾಡಿಕೊಡಿ. According to me, just because the Kannda language is the language of majority, it became administrative language. Since it became the administrative language; it is a State language; we respect it. ಆದರೆ ಉರ್ದು ತಮಿಳು, ತೆಲುಗು ಮುಂತಾದ ಭಾಷೆಗಳನ್ನೂ ಸಹ ಕಲಿಯಲು ತಾವು ಅವಕಾಶ ಮಾಡಿಕೊಡಬೇಕು.

೫-೦೦ ಪಿ. ಎಂ.

ಶ್ರೀ ಅಜೀಜ್ ಸೇಟ್.—ಕರ್ನಾಟಕದಲ್ಲಿ ಇರುವ ಹಾಗೆ ಕೇರಳದಲ್ಲಿ, ತಮಿಳ್‌ನಾಡಿನಲ್ಲಿ ಅಲ್ಪಸಂಖ್ಯಾತರು ಇಲ್ಲವೇ ? ಅಲ್ಲಿ ಉರ್ದು ಭಾಷೆ ಇಲ್ಲವೇ ? ತಮಿಳ್‌ನಾಡಿನಲ್ಲಿ ಉರ್ದು ಭಾಷೆ ಇದ್ದರೂ ಅಲ್ಲಿ ಲೆಕ್ಕ ಪತ್ರ ಮಾತ್ರ ತಮಿಳ್‌ನಲ್ಲಿರುತ್ತದೆ. ಹೀಗೆ ಅಲ್ಲಲ್ಲಿ ಲಿಂಗ್ವಿಸ್ಟಿಕ್ ಲಾಂಗ್ವೇಜ್ ಇದ್ದೇ ಇರುತ್ತದೆ. ಸ್ವಾತಂತ್ರ್ಯ ಬಂದು ೩೫ ವರ್ಷವಾದರೂ ಕೂಡ ಮೈಸೂರು ಯೂನಿವರ್ಸಿಟಿಯಲ್ಲಾಗಲೀ ಅಥವಾ ಬೆಂಗಳೂರು ಯೂನಿವರ್ಸಿಟಿಯಲ್ಲಾಗಲೀ ಕರ್ನಾಟಕ ಯೂನಿವರ್ಸಿಟಿಯಲ್ಲಾಗಲೀ ಉರ್ದು ಭಾಷೆ ಇಲ್ಲ, ಹೀಗಾದರೆ ಇದೆಂತಹ ಲೋಕಶಾಹಿ ಅಥವಾ ಸಮಾಜವಾದಿ ಸ್ಟೇಟ್ ಆಗುತ್ತದೆ ಹೇಳಿ. ನಿಮ್ಮದು ನೋಡಿ

ದರೆ ತಲೆ ಹಿಡಿದು ಜೀವನ ಮಾಡತಕ್ಕಂಥಾದ್ದು. ನಮ್ಮ ರಾಜ್ಯದಲ್ಲಿ ನಿಮ್ಮ ಲೆಕ್ಕಕ್ಕೆ ಅಲ್ಪಸಂಖ್ಯಾತರು ಏತಕ್ಕೆ ಇದ್ದಾರೆ ಎಂದರೆ ಬರೇ ಓಟು ನಿಮಗೆ ಕೊಡುವುದಕ್ಕೆ ಮಾತ್ರ ಇದ್ದಾರೆ ಅಷ್ಟೆ. ಈ ಸಂದರ್ಭದಲ್ಲಿ ನಿಮಗೆ ಒಂದು ಮಾತನ್ನು ನೆನಪು ಮಾಡಿಕೊಡುತ್ತೇನೆ. ಆದೇನೆಂದರೆ ನಿಮ್ಮ ಮುಖ್ಯ ಮಂತ್ರಿಗಳೇ ಒಂದು ಸಾರಿ ಮೈಸೂರು ಯೂನಿವರ್ಸಿಟಿಯಲ್ಲಿ ಪಬ್ಲಿಕ್ ಮೀಟಿಂಗ್‌ನಲ್ಲಿ ಬದನೆಕಾಯಿ ಅನ್ನುವ ಪದವನ್ನು ಹೇಳಿದ್ದಾರೆ. ನಿಮ್ಮ ತಲೆ ಹೀಗಿರಬೇಕಾದರೆ ಇದಕ್ಕೇನು ಹೇಳಬೇಕು ಅನ್ನುವುದನ್ನು ತಾವೇ ಯೋಚಿಸಿ ನೋಡಿ. ಸಿಗಡಿಯಲ್ಲಿ ಗಲೀಜು ಇರುವ ಹಾಗೆ ನಿಮ್ಮ ತಲೆ ಇದೆ ಅಷ್ಟೆ. ಮೀನಿನ ಹಾಗೆ ಇಲ್ಲ.

ಶ್ರೀ ಬಿ. ಬಾಸ್ಕರಶೆಟ್ಟಿ.—ನಿಮಗೆ ಹೇಗೆ ಗೊತ್ತು ?

ಶ್ರೀ ಅಜೀಜ್ ಸೇಟ್.— ಮನೆಯಲ್ಲಿ ಬೇಕಾದರೆ ಹೋಗಿ ನಿಮ್ಮ ಹೆಂಡತಿಗೆ ಕೇಳಿ. ಸಿಗಡಿಯಲ್ಲಿ ಗಲೀಜು ಇರುತ್ತದೋ ಇಲ್ಲವೋ ಅಂತ ಕೇಳಿ ತಿಳಿದುಕೊಂಡು ಬಂದು ಹೇಳಿ.

ಉಪಾಧ್ಯಕ್ಷರು.— ತಾವು ಬೇಗನೆ ಭಾಷಣ ಮುಗಿಸಿ, ಬೇರೆಯವರು ಮಾತನಾಡಬೇಕು.

ಶ್ರೀ ಪಿ. ರಾಂದೇವ್.—ಸ್ವಾಮಿ, ಅವರ ಕನ್ನಡ ಬಹಳ ಚೆನ್ನಾಗಿದೆ. ಸ್ವಾರಸ್ಯವಾಗಿ ಕನ್ನಡದಲ್ಲಿ ಮಾತನಾಡುತ್ತಿದ್ದಾರೆ. ಈ ಕನ್ನಡ ಎಲ್ಲೂ ಸಿಕ್ಕುವುದಿಲ್ಲ.

ಶ್ರೀ ಎಸ್ ಎಂ. ಶೀರ್ನಾಳಿ ಚಂದ್ರಶೇಖರ್.— ಅದು ಯಾವ ಕನ್ನಡ ಸ್ವಾಮಿ ?

ಶ್ರೀ ಪಿ. ರಾಂದೇವ್.—ತಾವೆಲ್ಲಾ ಕೇಳಿರಬಹುದು ಟಿ.ಪಿ. ಕೈಲಾಸಂ ಕನ್ನಡವನ್ನು. ಆದರೆ ಮಾನ್ಯ ಅಜೀಜ್ ಸೇಟರದ್ದು ಪಿ.ಟಿ. ಕೈಲಾಸಂ ಕನ್ನಡ ಅಷ್ಟೆ ವ್ಯತ್ಯಾಸ.

ಉಪಾಧ್ಯಕ್ಷರು.— ಮಧ್ಯೆ ಮಧ್ಯೆ ಅಡ್ಡಿ ಮಾಡಬೇಡಿ. ಬೇಗನೆ ಮುಗಿಸಲಿ.

ಶ್ರೀ ಅಜೀಜ್ ಸೇಟ್.— ಸ್ವಾಮಿ, ತಮಗೂ ಗೊತ್ತು. ನಾನು ಅನೇಕ ಸಾರಿ ಇಂಗ್ಲೀಷಿನಲ್ಲೇ ಮಾತನಾಡುತ್ತಿದ್ದುದು. ಈವಾಗ ಏತಕ್ಕೆ ಕನ್ನಡದಲ್ಲಿ ಮಾತನಾಡುತ್ತಿದ್ದೇನೆಂದರೆ ಇವರು ಈ ಕನ್ನಡಕ್ಕೆ ವಿರೋಧಿಗಳು ಇವರೊಬ್ಬರು ಪುಡಾರಿ ಎಂದು ಏನಾದರೂ ಅಂದುಕೊಂಡಾರು ಎಂದು ನಾನು ಕನ್ನಡದಲ್ಲಿ ಮಾತನಾಡುತ್ತಿದ್ದೇನೆ. ಅಷ್ಟೆ. ಈಗ ಭಾಷೆಯ ಬಗ್ಗೆ ಏನು ಒಂದು ಗೊಂದಲ ಎದ್ದಿದೆ ಅದರ ವಿಚಾರದಲ್ಲಿ ಇನ್ನೂ ತೀರ್ಮಾನವಾಗಿಲ್ಲಾ. ಕ್ಯಾಬಿನೆಟ್ ಮೀಟಿಂಗ್ ಮಾಡುತ್ತೇವೆ. ಅದನ್ನು ಒಪ್ಪಿಕೊಳ್ಳುತ್ತೇವೆ, ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ ಹಾಗೆ ಹೀಗೆ ಎಂದು ಹೇಳುತ್ತಿದ್ದಾರೇ ವಿನಾ ಇನ್ನೂ ಯಾವ ತೀರ್ಮಾನವನ್ನೂ ಸಹ ತೆಗೆದುಕೊಂಡಿಲ್ಲಾ. ಇವರಿಗೇ ಬೇಕಾಗಿರುವುದೇನೆಂದರೆ ಪ್ರೊಸೆಷನ್. ದುಡ್ಡು ಅಷ್ಟೆ. ಈಗ ತಾವೆಲ್ಲಾ ನೋಡಿದ್ದೀರಿ. ಮೊನ್ನೆ ನಡೆದಂಥಾ ಯೂತ್ ಕಾಂಗ್ರೆಸ್‌ನಲ್ಲಿ ಏನು ಮಾಡಿದರು, ಏನು ವೇರವಣಿಗೆ ಮಾಡಿದರು, ಏನು ಖರ್ಚು ಮಾಡಿದರು ಅನ್ನುವುದು ಗೊತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಈ ಪೋಲೀಸ್ ಕಮೀಷನರ್ ಬಗ್ಗೆ ಏನು ಹೇಳಿದ್ದಾರೆ ಎಂದರೆ ಬಹಳ ಚೆನ್ನಾಗಿ ವ್ಯವಸ್ಥೆ ಮಾಡಿದ್ದಾರೆ ಎಂದು ಥ್ಯಾಂಕ್ಸ್ ಕೊಟ್ಟಿದ್ದಾರೆ. ನಿಜವಾಗಿಯೂ ಇನ್ನಾರಾದರೂ ಇದ್ದಿದ್ದರೆ ಆ ರೀತಿ ಹೇಳುತ್ತಿದ್ದರೇ ? ರಾಜ್ಯದಲ್ಲಿ ಮಹಿಳಾ ವಿಂಗ್, ಸೇವಾದಳ ವಿಂಗ್ ರೀತಿ ಎ.ಐ.ಸಿ.ಸಿ. ಲಾ ಅಂಡ್ ಆರ್ಡರ್ ವಿಂಗ್ ಇದೆ. ಈ ಜವಾಬ್ದಾರಿಯನ್ನು ಹೊತ್ತಂಥಾವರು ದೇಶದಲ್ಲಿ ಲಾ ಅಂಡ್ ಆರ್ಡರ್ ಎಚ್ಚರಿಕೆ ವಹಿಸುತ್ತಾರೆ. ಮಾನ್ಯ ಕೆ.ಹೆಚ್. ಶ್ರೀನಿವಾಸ್‌ರವರು ಒಂದು ಮಾತು ಹೇಳಿದರು. ಆದೇನೆಂದರೆ ಮಾನ್ಯ ಮುಖ್ಯಮಂತ್ರಿಗಳು ಮೇಲೆ ಹೋಗುತ್ತಾರೆ ವಿನಾ ಕೆಳಗೆ ನೋಡುವುದಿಲ್ಲ ಎಂದು. ಈ ಮಾತು ಹೇಳುವಾಗ ನನಗೆ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಆದೇನೆಂದರೆ ನಾನು ಮಂತ್ರಿಯಾಗಿದ್ದ ಕಾಲದಲ್ಲಿ ಅರಸೀಕೆರೆಯಲ್ಲಿರತಕ್ಕಂಥಾ ಜೂಟ್ ಮತ್ತು ಕಾಯಿರ್ ಕಾರ್ಖಾನೆಯನ್ನು ಓಪನ್ ಮಾಡುವುದಕ್ಕೆ ಹೋಗಿದ್ದಾಗ ಅಲ್ಲಿ ಒಬ್ಬ ಆಫಿಕಾರಿಗಳು ಒಂದು ಸ್ಯಾಟಿಸ್‌ಟಿಕ್ಸ್ ಕೊಟ್ಟರು. ಅದು ಈ ರೀತಿ ಇದೆ. ಅವರು ಏನು ಹೇಳಿದರು ಎಂದರೆ ರಾಜ್ಯದಲ್ಲಿ ೫ ಲಕ್ಷ ೫೦ ಸಾವಿರದ ೫೬೦ ಕಾಯಿ ಹೆಚ್ಚುತ್ತಾ ಹೋಗುತ್ತದೆ ಎಂದು ಹೇಳಿದರು. ಅವರು ಹೇಳಿದ್ದನ್ನು ಲೆಕ್ಕ ಮಾಡುವವರು ಯಾರು ? ಅವರು ಹೇಳಿದ್ದನ್ನು ನಾವು ಒಪ್ಪಬೇಕು ಇಲ್ಲವೇ ನಾವೇ ಹೋಗಿ ಲೆಕ್ಕ ಮಾಡಬೇಕು. ಇನ್ನೊಂದು ಕಥೆ ಈ ಸಂದರ್ಭದಲ್ಲಿ ಜ್ಞಾಪಕಕ್ಕೆ ಬರುತ್ತದೆ ಅದೇನೆಂದರೆ ಒಬ್ಬ ಮಹಾರಾಜರು ಇದ್ದರಂತೆ. ಅವರು ಹೇಳಿದರಂತೆ ನಾನು ಕೇಳಿದ ಎರಡು ಪ್ರಶ್ನೆಗೆ ಯಾರಾದರೂ ಉತ್ತರ ಕೊಟ್ಟುಬಿಟ್ಟರೆ ಅವರಿಗೆ ನನ್ನ ಅರ್ಧ ರಾಜ್ಯವನ್ನೇ ಬರೆದುಕೊಟ್ಟುಬಿಡುತ್ತೇನೆಂದರಂತೆ. ಅದರಂತೆ ಒಂದು ದಿನ ಫಿಕ್ಸ್ ಆಯಿತು. ಪಲ್ಲರನ್ನೂ ಕರೆಸಿದರು. ಕೇಳಿದರು. ಏನೆಂದರೆ 'ಪ್ರಪಂಚದಲ್ಲಿ ಮಧ್ಯೆ ಇರುವ ಬಿಂದು'' ಯಾವುದು ಅನ್ನುವ

ಪ್ರಶ್ನೆ ಹಾಕಿದರು. ಯಾರ್ಯಾರೋ ಬಂದು ಏನೇನೋ ಹೇಳಿದರು. ಕೊನೆಯದಾಗಿ ಒಬ್ಬನು ಬಂದ, ಆತ ಕಚ್ಚೆ ಪಂಚೆ ಮತ್ತು ಪೇಟ ಹಾಕಿಕೊಂಡಿದ್ದ. ಆತ ಒಂದು ಬಾಲ ಮತ್ತು ಒಂದು ಕತ್ತೆ ಮತ್ತು ಒಂದು ರೇಜರ್ ತೆಗೆದುಕೊಂಡು ಬಂದು ಎಲ್ಲವನ್ನೂ ವಿವರಿಸಿ ಹೇಳಿದ. ಅದನ್ನು ಎಲ್ಲರೂ ಮೆಚ್ಚಿಕೊಂಡರು. ಅವನಿಗೆ ಅರ್ಧ ರಾಜ್ಯವನ್ನು ಆ ರಾಜರು ಕೊಟ್ಟುಬಿಟ್ಟರು, ಈಪೊತ್ತು ನಾನು ಒಂದು ಪುಸ್ತಕ ನೋಡಿದೆ. ನನಗೆ ಅದು ಓದುವುದಕ್ಕೆ ಬರುವುದಿಲ್ಲ. ಆದರೆ ಆ ಪುಸ್ತಕದಲ್ಲಿ ಗುಂಡೂರಾಯರ ಫೋಟೋ ಇದೆ. ಆ ಫೋಟೋ ಪುಸ್ತಕದ ಮುಂಭಾಗದಲ್ಲಿ ಬರಬೇಕಾಗಿತ್ತು, ಹಿಂದುಗಡೆ ಬಂದಿದೆ. ಮುಂಭಾಗದಲ್ಲಿ ಬೇರೆಯವರ ಫೋಟೋ ಇದೆ. ಅದರಲ್ಲಿ ಎಲ್ಲ ಚರಿತ್ರೆಯೂ ಬರೆದಿದೆ. ಏನು ಬರೆದಿದೆ ಎಂದರೆ ರಾಜ್ಯದಲ್ಲಿ ಒಂದು ಲಕ್ಷ ಜನತಾ ಮನೆಗಳನ್ನು ಕಟ್ಟಿದ್ದೇವೆ. ಎಷ್ಟೋ ಎಕರೆ ಜಮೀನುಗಳನ್ನು ಹಂಚಿದ್ದೇವೆ ಎಂದು ಬರೆದಿದ್ದಾರೆ. ಇದನ್ನು ನೋಡಿದರೆ ನನಗೆ ಏನು ನೆನಪು ಬರುತ್ತದೆ ಎಂದರೆ ಈ ಹಿಂದೆ ಒಂದು ಕಥೆ ಹೇಳಿದ ಹಾಗೆ ತೆಂಗಿನಕಾಯಿ ಮತ್ತು ರಾಜರ ಕಥೆ ಹೇಳಿದ ಹಾಗೆ ಆ ಕೆಲಸ ಮಾಡುವವರು ಯಾರು ? ಅವರು ಏನು ಎಣಿಸಿದರೋ ಅದನ್ನು ನಾವು ಒಪ್ಪಬೇಕು ಇಲ್ಲವೇ ನಾವೇ ಖುದ್ದಾಗಿ ಎಣಿಸಬೇಕು. ಇಲ್ಲಿ ಮಾನ್ಯ ರಾಜ್ಯಪಾಲರು ಮಾಡಿರತಕ್ಕಂಥ ಭಾಷಣಕ್ಕೆ ವಂದನೆಯನ್ನು ಸಲ್ಲಿಸುವುದಕ್ಕೆ ಇದರಲ್ಲಿ ವಿಶೇಷ ಏನಿದೆ ? ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಒಂದು ವರದಿಯನ್ನು ಬರೆದರು. ಅವರು ಅದನ್ನು ಇಲ್ಲಿ ಬಂದು ಓದಿ ಹೋಗಿಬಿಟ್ಟರು. ೧೯೮೧ರಲ್ಲಿ ಏನು ಹೇಳಿದ್ದರೋ ಅದನ್ನೇ ಮತ್ತೆ ಹೇಳಿದ್ದಾರೆ. ಶ್ರೀ ದೇವರಾಜ ಅರಸ್ ಸರ್ಕಾರ ಇದ್ದಂಥ ಕಾಲದಲ್ಲಿ ಏನು ಹೇಳಿದ್ದಾರೋ ಅದನ್ನೇ ಹೇಳಿದ್ದಾರೆ, ಮಾನ್ಯ ಗುಂಡೂರಾಯರ ಸರ್ಕಾರದಲ್ಲಿ ಏನು ಹೇಳಿದ್ದರೋ ಅದನ್ನೇ ಈಗಲೂ ಹೇಳಿದ್ದಾರೆ. ಅವರು ರಬ್ಬರ್ ಸ್ಟಾಂಪ್ ಇದ್ದಹಾಗೆ. I do not think he deserves our thanks nor you. You should answer to all your follies when you come to the polls. ನೀವು ಮೇ ತಿಂಗಳಲ್ಲಿ ಎಲೆಕ್ಷನ್ ಮಾಡುವುದಕ್ಕೆ ಇದ್ದೀರಿ. ನೀವು ಎಲೆಕ್ಷನ್ ಮಾಡಿದರೆ ನಿಮ್ಮ ಬೆಲೆ ಏನು ? ನೀವು ಯಾವ ಜಾಗದಲ್ಲಿ ಇದ್ದೀರಿ ಎಂಬುದು ಗೊತ್ತಾಗುತ್ತದೆ.

ಶ್ರೀ ಬಿ. ಭಾಸ್ಕರಶೆಟ್ಟಿ.— ಮೇ ತಿಂಗಳಲ್ಲಿ ಎಲೆಕ್ಷನ್ ಮಾಡುತ್ತಾರೆ ಎನ್ನುವ ವರ್ತಮಾನ ನಿಮಗೆ ಎಲ್ಲಿಂದ ಬಂತು ?

ಶ್ರೀ ಆಜೀಜ್‌ಸೇಟ್.— ನಿಮಗೆ ದಡ್ಡರು ಅಂತ ಹೇಳಬೇಕಾಗುತ್ತದೆ. ವಿರೋಧಪಕ್ಷದವರು ಯಾವತ್ತೂ ಒಂದಾಗುವುದಿಲ್ಲ, ಇದೇ ಸಮಯ ಚುನಾವಣೆಯಲ್ಲಿ ಗೆಲ್ಲುವುದಕ್ಕೆ ಅಂತ ಮೇ ತಿಂಗಳಲ್ಲಿ ಎಲೆಕ್ಷನ್ ಮಾಡಬೇಕು ಎಂದು ಇದ್ದಾರೆ.

ಶ್ರೀ ಬಿ. ಭಾಸ್ಕರಶೆಟ್ಟಿ.— ಇನ್ನು ಎಷ್ಟು ವರ್ಷ ಹೋದರೂ ವಿರೋಧಪಕ್ಷದವರು ಒಂದಾಗುವುದಿಲ್ಲ.

ಶ್ರೀ ಆಜೀಜ್ ಸೇಟ್.— ನಿಮಗೆ ಏನಾಗಿದೆ ಎಂದರೆ ಸತ್ತ ಹೆಣವನ್ನು ಎದುರುಗಡೆ ಇಟ್ಟುಕೊಂಡು ಅಳುವವರಿಗೆ ಕಣ್ಣಿಗೆ ಯಾವುದೂ ಸರಿಯಾಗಿ ಕಾಣುವುದಿಲ್ಲ. ಹಾಗೆ ನಿಮಗೆ ಯಾವುದೂ ಕಾಣುತ್ತಾ ಇಲ್ಲ, ಹಾಗಾಗಿದೆ. ನಿಮ್ಮಲ್ಲಿ ಸೆಲ್ಫ್ ಕಾನ್ಸೈನ್ಸ್ ಇಲ್ಲ. ನಾನು ಮೊದಲೇ ಹೇಳಿದ ಹಾಗೆ ನಿಮಗೆ ಮಾನ ಮರ್ಯಾದೆಯಿಲ್ಲ. ಅದು ನಿಮ್ಮಲ್ಲಿ ಇಲ್ಲವೇ ಇಲ್ಲ, ನಮಗೆ ಸೆಲ್ಫ್ ಕಾನ್ಸೈನ್ಸ್ ಇದೆ ಎಲ್ಲಾ ಇದೆ. ನಿಮ್ಮ ಜೊತೆಗೆ ಬಂದು ನಾವು ಏತಕ್ಕೆ ಮಾನ-ಮರ್ಯಾದೆ ಇಲ್ಲದವರಾಗಬೇಕು, ನಾವು ಆರ್ಗನೈಸ್ ಆಗಿದ್ದೇವೆ. ನಾವು ಅರ್ಬನ್‌ನಲ್ಲಿ ಇದ್ದೇವೆ. ನೀವೆಲ್ಲಾ ಕೊಳಚೆ ಪ್ರದೇಶದಲ್ಲಿದ್ದೀರಿ. ಆ ಜನ ನಿಮ್ಮನ್ನು ಆರಿಸಿ ಕಳಿಸುತ್ತಾರೆ. ಇನ್ನು ಮುಂದೆ ಅವರು ನಿಮ್ಮನ್ನು ಆರಿಸಿ ಕಳಿಸುವುದಿಲ್ಲ ನೀವು ಇಲ್ಲಿ ಇರುವುದಿಲ್ಲ, ಮನೆಯಲ್ಲಿ ಇರುತ್ತೀರಿ. ೩೦೦ ರೂಪಾಯಿ ಪೆನ್‌ಷನ್ ಸಿಕ್ಕಿದರೆ ಸಾಕಪ್ಪ ಅಂತ ಹೇಳುವ ಕಾಲ ಬರುತ್ತದೆ. ಅವರಿವರ ಕೈ ಕಾಲು ಕಟ್ಟಿಕೊಂಡು ಶ್ರೀ ಗುಂಡೂರಾಯರ ಮತ್ತು ಶ್ರೀ ಶ್ರೀಕಂಠಯ್ಯನವರ ಹಿಂದಿಂದೆ ತಿರುಗಾಡುವ ಪರಿಸ್ಥಿತಿ ಬರುತ್ತದೆ. ಈಗಲೇ ಪೆನ್‌ಷನ್ ರೂಲ್ಸ್‌ಗೆ ಅಮೆಂಡ್‌ಮೆಂಟ್ ಮಾಡಿಸಿ, ಒಂದು ಟರ್ಮ್ ಆಗಿದ್ದರೆ ೫೦೦ ರೂಪಾಯಿ ಪೆನ್‌ಷನ್, ೨ ಟರ್ಮ್ ಆಗಿದ್ದರೆ ೧೦೦೦ ರೂಪಾಯಿ ಎಂದು ಅಮೆಂಡ್‌ಮೆಂಟ್ ಮಾಡಿಸಿ. ಮೊನ್ನೆ ಯಾರೋ ಒಬ್ಬರು ಬಂದಿದ್ದರು, ಒಮ್ಮೆ ಎಲೆಕ್ಷನ್‌ನಲ್ಲಿ ಸೋತಹೋದೆ. ನನಗೆ ಪೆನ್‌ಷನ್ ಸಿಕ್ಕುತ್ತಾ ಇಲ್ಲ ಎಂದು ಹೇಳಿದರು. ಅಂತಹವರೂ ಇರಬಹುದು. ಅವರಿಗೂ ಪೆನ್‌ಷನ್ ಕೊಟ್ಟು ಕಳಿಸಿಬಿಡಿ. ನೀವು ಮಿನಿಸ್ಟರ್ ಆಗಿದ್ದರೆ ೫೦೦ ರೂಪಾಯಿ ಅಥವಾ ೧೦೦೦ ರೂಪಾಯಿ ಪೆನ್‌ಷನ್ ಮಾಡಿಕೊಂಡು ಹೋಗಿ.

ಶ್ರೀ ಶೀರ್ನಾಳಿ ಚಂದ್ರಶೇಖರ್.— ನೀವು ಪೆನ್‌ಷನ್ ತೆಗೆದುಕೊಳ್ಳುವುದಿಲ್ಲವೇ ?

SRI BHEEMANNA KHANDRE.— You will also take pension.

ಶ್ರೀ ಆಜೀಜ್ ಸೇಟ್.—ನಾನು ಏತಕ್ಕೆ ಪೆನ್‌ಷನ್ ತೆಗೆದುಕೊಳ್ಳಬಾರದು ? ಎಲ್ಲರಿಗೂ ಪೆನ್‌ಷನ್ ರೂಲ್ಸ್ ಇದೆ. ರಿಟೈರ್ ಆದಮೇಲೆ ನಾವೆಲ್ಲಾ ಪೆನ್‌ಷನ್ ತೆಗೆದುಕೊಂಡೇ ತೆಗೆದುಕೊಳ್ಳುತ್ತೇವೆ. ನಿಮಗೆ ಏತಕ್ಕೆ ಹೊಟ್ಟೆಕಿಚ್ಚು, ಕುದುರೆ ಹುರಂಳಿ ತಿಂದರೆ ಕತ್ತೆಗೆ ಏತಕ್ಕೆ ಹೊಟ್ಟೆನೋವು !

ಉಪಾಧ್ಯಕ್ಷರು.— ದಯವಿಟ್ಟು ಕನ್‌ಕ್ಲೂಡ್ ಮಾಡಿ.

ಶ್ರೀ ಆಜೀಜ್‌ಸೇಟ್.— ಆಯಿತು, ನಾನು ಇಲ್ಲಿಗೆ ನನ್ನ ಭಾಷಣವನ್ನು ಮುಗಿಸಿಬಿಡುತ್ತೇನೆ.

ಉಪಾಧ್ಯಕ್ಷರು.— ಪ್ರಮೀಳಾರವರೇ, ನೀವು ೧೫ ನಿಮಿಷ ಮಾತನಾಡಿ.

ಶ್ರೀಮತಿ ಪ್ರಮೀಳಾ.— ಮಾನ್ಯ ಸದಸ್ಯರಾದ ಆಜೀಜ್‌ಸೇಟ್‌ರವರು ೧ ಗಂಟೆ ಮಾತನಾಡಿದರಲ್ಲ ಸ್ವಾಮಿ.

ಶ್ರೀ ಆಜೀಜ್‌ಸೇಟ್.— ನೀವು ಮಾಡಿದ ಪಾಪವನ್ನು ತೊಳೆಯುವವರು ನಾವು ಆದಕ್ಕಾಗಿ ನಾವು ೧ ಗಂಟೆ ಮಾತನಾಡುತ್ತೇವೆ. ನಿಮ್ಮ ಪಾಪವನ್ನು ನೀವು ತೊಳೆಯುವುದಕ್ಕೆ ಆಗುತ್ತದೆಯೇ ? ಆಗುವುದಿಲ್ಲ. ಆದಕ್ಕಾಗಿ ನೀವು ೧೫ ನಿಮಿಷ ಮಾತನಾಡಿ.

ಶ್ರೀಮತಿ ಪ್ರಮೀಳಾ,— ಮಾನ್ಯ ಉಪಾಧ್ಯಕ್ಷರೇ, ಮಾಡಿದವರ ಪಾಪ ಆಡಿದವರ ಬಾಯಲ್ಲಿ ಎಂದು ಒಂದು ಗಾದೆ ಮಾತು ಇದೆ. ನಾವೇನೂ ಪಾಪ ಮಾಡಿಲ್ಲ ಅಂತ ನಾನು ಅಂದುಕೊಂಡಿದ್ದೇನೆ. ಮಾನ್ಯ ಆಜೀಜ್‌ಸೇಟ್‌ರವರ ದೃಷ್ಟಿಯಲ್ಲಿ ಹಾಗಿದ್ದರೆ, ನಾವು ಮಾಡಿರುವ ಪಾಪವನ್ನು ಅವರು ಎತ್ತಿ ಆಡಿದ್ದರಿಂದ ಅದು ಅವರಿಗೆ ಹೋಗುತ್ತದೆಯೇ ಹೊರತು ನಮ್ಮ ಪಕ್ಷದಲ್ಲಿ ಯಾರಿಗೂ ಹೋಗುವುದಿಲ್ಲ. ಈ ಕೆಲಸವನ್ನು ಅವರು ಚೆನ್ನಾಗಿ, ಸ್ವಚ್ಛವಾಗಿ ಮಾಡಿದ್ದಾರೆಂದು ನಾನು ಹೇಳಬೇಕಾಗುತ್ತದೆ.

ಶ್ರೀ ಆಜೀಜ್‌ಸೇಟ್.— ನೀವು ಹೈಕೋರ್ಟ್ ಜಡ್ಜ್ ಆಗುವವರು ನಿಮ್ಮ ಜಾತಿ ಬೇರೆ, ಅದು ಹೇಗೆ ಹೋಗುತ್ತದೆ ?

ಶ್ರೀಮತಿ ಪ್ರಮೀಳಾ. — ಮಾನ್ಯ ಅಧ್ಯಕ್ಷರೇ, ಕಾಮಾಲೆರೋಗ ಅಂತ ಒಂದು ರೋಗ ಇದೆ. ಈ ರೋಗ ಬಂದವರಿಗೆ ಅವರ ಸುತ್ತಲ್ಲೂ ಏನಿದ್ದರೂ ಅದು ಹಳದಿಯಾಗಿ ಕಾಣುತ್ತದೆ. ಹಾಗೆ ವಿರೋಧ ಪಕ್ಷದಲ್ಲಿರುವವರಿಗೆ–ಕಾಮಾಲೆ ರೋಗ ಬಂದಿರುವವರಿಗೆ ನಾವು ಮಾಡಿರುವುದೆಲ್ಲಾ ಕಾಮಾಲೆ ತರಹ ಕಾಣುತ್ತಿದೆ.

ಶ್ರೀ ಆಜೀಜ್ ಸೇಟ್.— ನೀವು ಈ ಕಡೆ ಇದ್ದಾಗ ನಿಮಗೆ ಹಾಗೆ ಕಾಣಿಸುತ್ತಾ ಇರಲಿಲ್ಲವೇ ?

ಶ್ರೀಮತಿ ಪ್ರಮೀಳಾ.—ನೀವು ಮಾಡಿದ ಜಗಳ ನೋಡಿ,ನಿಮ್ಮ ಕಚ್ಚಾಟ ನೋಡಿ ನಿಮ್ಮ ಸಹವಾಸ ಸಾಕು ಅಂತ ಇಲ್ಲಿಗೆ ಬರಬೇಕಾಯಿತು. ನೀವು ಈಗ ಅಲ್ಲಿ ಏನು ಮಾಡುತ್ತಿದ್ದೀರಿ ಎನ್ನುವುದು ನಮಗೆ ಗೊತ್ತಾಗುತ್ತಿದೆ.

ಶ್ರೀ ಆಜೀಜ್‌ಸೇಟ್.— ನಾವೇನೂ ಜಗಳ ಮಾಡಲಿಲ್ಲ. ನೀವು ಯಾವಾಗಲೂ ಉದಾರ ಮನಸ್ಸಿನಿಂದ ಮಾತನಾಡಿ.

ಶ್ರೀಮತಿ ಪ್ರಮೀಳಾ.— ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಇದುವರೆಗೆ ಮಾತನಾಡಿದಂಥ ಎಲ್ಲಾ ವಿಷಯಗಳನ್ನೂ ನಾನು ಕೇಳಿದ್ದೇನೆ. ಅವರ ಪಕ್ಷದ ಧೋರಣೆ ಏನು ಎಂಬುದನ್ನೂ ನಾನು ಕೇಳಿದ್ದೇನೆ. ಸ್ವಾಮಿ, ಈ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಈ ವಿರೋಧಪಕ್ಷದವರು ಏತಕ್ಕೆ ಇದ್ದಾರೆ ಎಂದರೆ ಈ ಆಡಳಿತಪಕ್ಷದಲ್ಲಿ ಇದ್ದವರು ಏನಾದರೂ ತಪ್ಪು ಮಾಡಿದರೆ ಅದನ್ನು ಅಧಿಕೃತವಾಗಿ ಸ್ಟ್ಯಾಟಿಸ್ಟಿಕ್ಸ್ ಮೂಲಕ ನೀವು ಇಂತಹ ತಪ್ಪು ಮಾಡಿದ್ದೀರಿ, ಇನ್ನು ಮುಂದೆ ಈ ತರಹ ತಪ್ಪು ಮಾಡಬೇಡಿ ಎಂದು ಹೇಳಿಂಥ ಕ್ರಿಯಾತ್ಮಕ ಕೆಲಸ ಮಾಡುವುದನ್ನು ನಾನು ನೋಡಿದ್ದೇನೆ. ಆದರೆ ಅವರು ಏನು ಮಾಡುತ್ತಿದ್ದಾರೆ ಎಂದರೆ ಪುಸ್ತಕವನ್ನು ತೆಗೆದು, ಇದರಲ್ಲಿ ಏನಿದೆ ? ಇದರಲ್ಲಿ ಪಟ್ಟಿ ಇದೆಯೇ ಹೊರತು ಬೇರೆ ಏನೂ ಇಲ್ಲ ಎಂದು ಹೇಳುತ್ತಿದ್ದಾರೆ. ಆ ಪುಸ್ತಕವನ್ನು ತೆಗೆದುನೋಡಿ. ಸಂಪೂರ್ಣವಾಗಿ ಓದಿ ನೀವು ಹೇಳಿರುವುದರಲ್ಲಿ ಇಂತಹ ತಪ್ಪು ಇದೆ. ಅದನ್ನು ನಾವು ಗುರುತು ಮಾಡಿ

